ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ
ಹುಲಸೂರು ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 2001–02 ರಿಂದ
2003–04ರವರೆಗೆ ಕೊರೆದ ಕೊಳವೆಬಾವಿಗಳ ವಿವರ

1. ಶ್ರೀ. ಸಿಲಾರಸಾಬ್ ತಂದೆ ಲಾಲ್‌ಅಹ್ಮದ್, ಮುಗನೂರು ಗ್ರಾಮ, ಹುಲಸೂರು ತಾಲ್ಲೂಕು
2. ಶ್ರೀ. ಅಬ್ದುಲ್ ಗಫೂರ್ ತಂಡ ಲಾಲ್‌ಅಹ್ಮದ್, ಮುಗನೂರು ಗ್ರಾ, ಹುಲಸೂರು ತಾಲ್ಲೂಕು
3. ಶ್ರೀ ಅಬ್ದುಲ್ ಜಬ್ಬರ್ ತಂದೆ ಮಹೆಬೂಬ್, ಹಳ್ಳಿಖೇಡ ಗ್ರಾಮ, ಹುಲಸೂರು ತಾಲ್ಲೂಕು
4. ಶ್ರೀ ಅಬ್ದುಲ್ ಸಮಾದ್ ತಂಡ ವಾಹಬ್, ಹಳ್ಳಿಖೇಡ ಗ್ರಾಮ, ಹುಲಸೂರು ತಾಲ್ಲೂಕು
5. ಶ್ರೀ ಮಹ್ಮದ್ ಇಸಾಕ್ ತಂದೆ ಅಬ್ದುಲ್ ಖಾದರ್, ಹಳ್ಳಿಖೇಡ ಗ್ರಾಮ, ಹುಲಸೂರು ತಾಲ್ಲೂಕು
6. ಶ್ರೀ ಗುಲಾಮ್ ಅಹ್ಮದ್ ತಂದೆ ಶೇಕ್ ಚಾಂದ್, ಹಳ್ಳಿಖೇಡ ಗ್ರಾಮ, ಹುಲಸೂರು ತಾಲ್ಲೂಕು
7. ಶ್ರೀ ಅಹ್ಮದ್ ಯೂಸುಫ್ ತಂದೆ ಅಬ್ದುಲ್ ರಜಾಕ್, ಜೇನ ಚಿಂಚೋಳಿ ಗ್ರಾಮ, ಹುಲಸೂರು ತಾಲ್ಲೂಕು
8. ಶ್ರೀಮತಿ ಗೌರನ್ನಿಸಾಬೇಗಂ ಜಬ್ಬರ್, ಹುಲಸೂರು ಗ್ರಾಮ, ಹುಲಸೂರು ತಾಲ್ಲೂಕು
9. ಶ್ರೀ ಸೈಯದ್ ಮುಜೀಬ್ ತಂದೆ ಉಸ್ಮಾನ್ ಸಾಬ್, ಹುಲಸೂರು ಗ್ರಾಮ, ಹುಲಸೂರು ತಾಲ್ಲೂಕು
10. ಶ್ರೀ ಗುಂಡಪ್ಪಾ ತಂದೆ ನಾಗಪ್ಪ, ಕಬೀರಾಬಾದವಾಡಿ ಗ್ರಾಮ, ಹುಲಸೂರು ತಾಲ್ಲೂಕು
11. ಶ್ರೀಮತಿ ಶಹನಾ ಗಂ.ಅಜಿಮುದ್ದೀನ್, ಮಲಕಾಪೂರವಾಗಿ ಗ್ರಾಮ, ಹುಲಸೂರು ತಾಲ್ಲೂಕು
12. ಶ್ರೀಮತಿ ಕಮಲಮ್ಮ ಗಂ.ಗುಂಡಪ್ಪಾ, ಕಬೀರಾಚಾದವಾಗಿ ಗ್ರಾಮ, ಹುಲಸೂರು ತಾಲ್ಲೂಕು
13. ಶ್ರೀ ಅಕ್ತರ್ ರೆಹೇಮಾನ್ ತಂದೆ ಖೈಸರ್ ರೆಹಮಾನ್ ಓತಗಿ ಗ್ರಾಮ, ಹುಲಸೂರು ತಾಲ್ಲೂಕು
14. ಶ್ರೀ ಬುರಾನ್‌ಸಾಬ್ ತಂದೆ ಮಸ್ತಾನಸಾಬ್, ಮುಗನೂರು ಗ್ರಾಮ ಹುಲಸೂರು ತಾಲ್ಲೂಕು

ಸಂಖ್ಯೆ: ಸಕಇ 47 ಎಸೆ ಗಿ ಸಿ 2005

1851(2638) ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು): ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೈಗಾರಿಕಾ ವಲಯ ಸ್ಥಾಪಿಸಲು ವಿಶೇಷ ಯೋಜನೆಯನ್ನು ರೂಪಿಸಲಾಗಿದೆಯೇ? ಇದ್ದಲ್ಲಿ, ವಿವರ ಒದಗಿಸಿ;

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಕೈಗಾರಿಕೆಗಳು ಯಾವುವು (ತಾಲ್ಲೂಕುವಾರು ವಿವರ ನೀಡುವುದು);

ಶ್ರೀ ಪಿ.ಜಿ.ಆರ್.ಸಿಂಧ್ಯ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು):

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವುದೇ ವಿಶೇಷ ಕೈಗಾರಿಕಾ ವಲಯ ಸ್ಥಾಪಿಸುವ ಪ್ರಸ್ತಾವನೆ ಇರುವುದಿಲ್ಲ.

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿನ ಕೈಗಾರಿಕೆಗಳು ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು:

1. ಕುದುರೆಮುಖ ಕಬ್ಬಿಣ ಮತ್ತು ಅದಿರು ಕಂಪನಿ ನಿಯಮಿತ (ಬಂಡವಾಳ ಹೂಡಿಕೆ ರೂ.1116.50 ಕೋಟಿ)
2. ವಿಜ್ಞಾನ್ ಇಂಡಸ್ಟ್ರೀಸ್ ಲಿಮಿಟೆಡ್., ತರೀಕೆರೆ (ಬಂಡವಾಳ ಹೂಡಿಕೆ ರೂ.4.62 ಕೋಟಿ)
3. ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್, ಚಿಕ್ಕಮಗಳೂರು (ಬಂಡವಾಳ ಹೂಡಿಕೆ ರೂ.3.00 ಕೋಟಿ)

ಸಣ್ಣ ಕೈಗಾರಿಕಾ ಘಟಕಗಳು:

ಕ್ರ.ಸ.	ತಾಲ್ಲೂಕು	ಘಟಕಗಳ ಸಂಖ್ಯೆ:
1.	ಚಿಕ್ಕಮಗಳೂರು	1297
2.	ತರೀಕೆರೆ	1030
3.	ಕಡೂರು	1039
4.	ನರಸಿಂಹರಾಜಪುರ	486
5.	ಮೂಡಿಗೆರೆ	584
6.	ಕೊಪ್ಪ	449
7.	ಶೃಂಗೇರಿ	358
	ಒಟ್ಟು	5243

ಸಣ್ಣ ಕೈಗಾರಿಕೆಗಳಲ್ಲಿನ ಒಟ್ಟು ಬಂಡವಾಳ ಹೂಡಿಕೆ ರೂ.78.78 ಕೋಟಿಗಳು.

1852(2342) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಹೈನುಗಾರಿಕೆಯಿಂದಾಗಿ ಜೀವನ ನಡೆಸುತ್ತಿರುವವರ ವಿವರಗಳೇನು?

ಆ) ಹೈನುಗಾರಿಕೆಗೆ ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ಸೌಲಭ್ಯಗಳ ವಿವರಗಳೇನು?

ಇ) ಹೈನುಗಾರಿಕೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಿ, ಹೈನುಗಾರಿಕೆಯನ್ನು ಉದ್ಯಮವಾಗಿ ಪರಿಗಣಿಸುವ ದಿಶೆಯಲ್ಲಿ ಸರ್ಕಾರ ಯಾವ ಯಾವ ಕ್ರಮ ವಹಿಸಲಿದೆ?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ನಗರದಲ್ಲಿ ಒಟ್ಟು ಕುಟುಂಬಗಳ ಸಂಖ್ಯೆ	114792
2003ರ ಜಾನುವಾರು ಗಣತಿಯ ಪ್ರಕಾರ	
ಹೈನುಗಾರಿಕೆಯಲ್ಲಿ ತೊಡಗಿರುವವರ ಸಂಖ್ಯೆ	2861
ಮಿಶ್ರ ತಳಿ ಹಸುಗಳ ಸಂಖ್ಯೆ	7942
ವಿದೇಶಿ ತಳಿ ಹಸುಗಳ ಸಂಖ್ಯೆ	65
ಎಮ್ಮೆಗಳ ಸಂಖ್ಯೆ	88